ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ 26.07.2023.

ಅರ್ಜಿ ಆದೇಶದ ಮೇರೆಗೆ ಮುಂದುವರೆದ ಪಾಟೀಸವಾಲುಃ ವಾದಿಗಳ ಪರ ಶ್ರೀ ಜಿ ಎಸ್ ವಕೀಲರಿಂದಃ

3. 1 ನೇ ಪ್ರತಿವಾದಿಯ ಗಂಡನ ಹೆಸರು ಈರಪ್ಪ ಎಂದರೆ ನಿಜ. ನನ್ನ ತಂದೆ ಶಿವಪ್ಪ, 1 ನೇ ಪ್ರತಿವಾದಿಯ ಗಂಡ ಈರಪ್ಪ, ವಾದಿಯ ತಂದೆ ಕೊಟ್ರಪ್ಪ, 3 ನೇ ಪ್ರತಿವಾದಿಯ ತಂದೆ ವೀರಭದ್ರಪ್ಪ ರವರು ಖಾಸಾ ಅಣ್ಣ ತಮ್ಮಂದಿರು ಎಂದರೆ ನಿಜ. ಸದರಿಯವರುಗಳು ರುದ್ರಪ್ಪ ರವರ ಮಕ್ಕಳು ಎಂದರೆ ನಿಜ. ದಾವಾ ಸ್ವತ್ತು ಸದರಿ ರುದ್ರಪ್ಪ ರವರ ಆಸ್ತಿಯಾಗಿರಲಿಲ್ಲ ಎಂದರೆ ದಾವಾ ಸ್ವತ್ತು ಈರಪ್ಪ ರವರ ಆಸ್ತಿಯಾಗಿತ್ತು. ಸದರಿ ರುದ್ರಪ್ಪ ರವರಿಗೆ ಪಿತ್ರಾರ್ಜಿತವಾಗಿ ಬಂದ ಸಾಕಷ್ಟು ಆಸ್ತಿಗಳು ಇದ್ದವು ಎಂದರೆ ನಿಜ. 1956 ರಲ್ಲಿ ಕೊಟ್ರಪ್ಪ, ಶಿವಪ್ಪ, ವೀರಭದ್ರಪ್ಪ ಮತ್ತು ರುದ್ರಪ್ಪ ರವರು ಹಿಸ್ಸೆ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಹಿಸ್ಸೆಯ ಬಗ್ಗೆ ಮಾತುಕತೆ ಮಾಡಿಕೊಂಡಿರುತ್ತಾರೆ. 1956 ರಿಂದ ಸದರಿ ನಾಲ್ಕು ಜನರು ಪ್ರತ್ಯೇಕವಾಗಿ ಜಮೀನುಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ನಿಜ. ಸದರಿ ಕಾಲದಿಂದಲೇ ಸದರಿ ನಾಲ್ಕು ಜನರು ಜಮೀನುಗಳನ್ನು ಬೇರೆ ಬೇರೆಯಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ನಿಜ.

4. ನೆರಲಗಿ ಗ್ರಾಮದ ಸ.ನಂ.116/1 ರಲ್ಲಿ 2 ಎಕರೆ 16 ಗುಂಟೆಗೆ ಬಸವಂತಪ್ಪ ರವರು ವ್ಯಾಜ್ಯ ಸಲ್ಲಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನೆರಲಗಿ ಗ್ರಾಮದ ಸ.ನಂ.116/1 ರಲ್ಲಿ ಒಟ್ಟು 4 ಎಕರೆ 12 ಗುಂಟೆ ಜಮೀನು ಇದೆ ಎಂದರೆ ನಿಜ. ನೆರಲಗಿ ಗ್ರಾಮದ ಸ.ನಂ.116/1 ರ ಜಮೀನು ಮೂಲತಃ ಆನವಟ್ಟಿಯ ವಿರುಪಾಕ್ಷಪ್ಪ ರವರ ಮಗ ನರಸಪ್ಪ ರವರಿಗೆ ಸೇರಿದ ಸ್ವತ್ತಾಗಿತ್ತು ಎಂದರೆ ನಿಜ. ಸದರಿ ಸ್ವತ್ತನ್ನು ಆನವಟ್ಟಿಯ ಲಕ್ಷ್ಮಿಕಾಂತ ರವರು ದಿನಾಂಕ 04.12.1948 ರ ಕ್ರಯ ಪತ್ರದ ಮುಖಾಂತರ ಪಡೆದುಕೊಂಡಿರುತ್ತಾರೆ ಎಂದರೆ ನಿಜ. ದಿನಾಂಕ 02.05.1961 ರಲ್ಲಿ ಸದರಿ ಲಕ್ಷ್ಮೀಕಾಂತ ರವರಿಂದ ಸ.ನಂ.116/1 ರಲ್ಲಿ 4 ಎಕರೆ 12 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಗಂಡ ಈರಪ್ಪ ರವರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ನಿಜ.

5. ಸದರಿ ಈರಪ್ಪ ರವರು ಖರೀದಿಸಿದ 4 ಎಕರೆ 12 ಗುಂಟೆ ಜಮೀನಿನಲ್ಲಿ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ನಿಡಿ 1 ರ ಪ್ರಕಾರ ಹಿಸ್ಸೆ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ನಿಜ. ದಿನಾಂಕ 10.12.1980 ರಂದು ಸದರಿ 4 ಎಕರೆ 12 ಗುಂಟೆಯ ಉಳಿಕೆ ಜಮೀನು 2 ಎಕರೆ 12 ಗುಂಟೆಯನ್ನು ವಾದಿ 1 ನೇ ಪ್ರತಿವಾದಿಯ ಗಂಡ ಈರಪ್ಪ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಖರೀದಿ ಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಕ್ರಯ ಪತ್ರದಂತೆ ಖಾತೆಯಾಗಬಾರದು ಎಂದು 1 ನೇ ಪ್ರತಿವಾದಿ ತಕರಾರು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಸ್ವತ್ತಿನ ಖಾತೆ ಬದಲಾವಣೆ ಮಾಡುವಂತೆ ಅರ್ಜಿಗಳನ್ನು ಕೊಟ್ಟಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

6. ವಾದಿಯು ಬಿ ಎಸ್.ಸಿ ಪದವಿದರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಹೊನ್ನಾಳಿಯಲ್ಲಿ ಪಿ.ಡಬ್ಲೂ.ಡಿ ಕಾಂಟ್ರಾಕ್ಟರ್ ರವರೊಂದಿಗೆ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಸದರಿಯವರ ಸ್ವಂತ ದುಡಿಮೆಯಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. ನಿಡಿ 1 ಹಿಸ್ಸೆ ಪತ್ರ ಆದ ನಂತರ ವಾದಿ ಮತ್ತು ನಮ್ಮ ನಡುವೆ ಒಟ್ಟು ಕುಟುಂಬದ ಅಸ್ಥಿತ್ವ ಇರುವುದಿಲ್ಲ ಎಂದರೆ ನಿಜ. ನಿಪಿ 12 ದಾಖಲೆಯ ಪ್ರಕಾರ ದಾವಾ ಸ್ವತ್ತು ವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಮೇಲೆ ನನಗಾಗಲೀ, ಇತರ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಿಪಿ 12 ರ ಕ್ರಯ ಪತ್ರದಂತೆ ಖಾತೆ ಬದಲಾವಣೆಯಾಗಿರುವುದಿಲ್ಲ ಎಂಬ ಕಾರಣಕ್ಕೆ ವಾದಿಯ ಹಕ್ಕು ಮತ್ತು ಸ್ವಾಧೀನವನ್ನು ಅಲ್ಲಗಳೆಯುತ್ತಿದ್ದೇನೆ ಎಂದರೆ ಸುಳ್ಳು.

7. ದಾವಾ ಸ್ವತ್ತಿನಲ್ಲಿ ವಾದಿ ಕೊಳವೆ ಬಾವಿ ತೋಡಿಸಿರುತ್ತಾರೆ ಎಂದರೆ ವಾದಿಯ ಹಿಸ್ಸೆಯ ಜಮೀನಿನಲ್ಲಿ ವಾದಿ ಕೊಳವೆ ಬಾವಿ ತೋಡಿಸಿರುತ್ತಾರೆ. ದಾವಾ ಆಸ್ತಿಯ ಸಂಬಂಧ ಯಾವುದೇ ಹಿಸ್ಸೆಯಾಗಿರುವುದಿಲ್ಲ ಎಂದರೆ 1980 ರಲ್ಲಿ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಹಿಸ್ಸೆಯಾಗಿರುತ್ತದೆ. ನಿಡಿ 1 ಹಿಸ್ಸೆ ಪತ್ರದ ಕಾಲಕ್ಕೆ ವಾದಿಯು ದಾವಾ ಸ್ವತ್ತನ್ನು ಖರೀದಿಯೇ ಮಾಡಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ

ಎಂದು ಉತ್ತರ ನೀಡಿರುತ್ತಾರೆ.

8. ನಾವು ಈರಪ್ಪ ರವರು ಖರೀದಿ ಮಾಡಿದ ಆಸ್ತಿಯನ್ನು ಮಾತ್ರ ಹಿಸ್ಸೆ ಮಾಡಿದ್ದು ವಾದಿ ಖರೀದಿ ಮಾಡಿದ್ದ ಆಸ್ತಿಯನ್ನು ಹಿಸ್ಸೆ ಮಾಡಿರುವುದಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತಿನ ಪೂರ್ವಕ್ಕೆ ಪುಟ್ಟಪ್ಪ ಬಿನ್ ಶಿವಪ್ಪ ರವರ ಆಸ್ತಿ ಬರುತ್ತದೆ ಎಂದರೆ ನಿಜ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಸ.ನಂ.114/2 ರ ಜಮೀನು ಬರುತ್ತದೆ ಎಂದರೆ ನಿಜ. ದಾವಾ ಸ್ವತ್ತಿನ ಉತ್ತರಕ್ಕೆ ಖರೀಂ ಸಾಬ್ ರವರ ಜಮೀನು ಬರುತ್ತದೆ ಎಂದರೆ ನಿಜ. ದಾವಾ ಸ್ವತ್ತಿನ ದಕ್ಷಿಣಕ್ಕೆ ಸ.ನಂ.116/1 ರ ಉಳಿದ ಸ್ವತ್ತುಗಳು ಬರುತ್ತವೆ ಎಂದರೆ ನಿಜ.

9. ನಾನು 2015 ರ ಡಿಸೆಂಬರ್ ನ ಕೋನೆಯ ವಾರದಲ್ಲಿ ದಾವಾ ಸ್ವತ್ತಿನ ಸ್ವಾಧೀನತೆಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸುಳ್ಳು. ದಾವಾ ಸ್ವತ್ತಿಗೆ ನಮುಗೂ ಹಕ್ಕು ಇದೆ ಎಂದು ನಾನು ದುರ್ವ್ಯಾಜ್ಯ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನಮ್ಮ ವಿರುದ್ದ ವಾದಿ ಆನವಟ್ಟಿ ಪೋಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ನಮಗೆ ಹಿಸ್ಸೆ ಹಕ್ಕು ಇದೆ ಎಂದು ಪರಿಹಾರ ಕೇಳಿರುವುದಿಲ್ಲ ಎಂದರೆ ನಮಗೆ 25 ಗುಂಟೆಯಲ್ಲಿ ಹಿಸ್ಸೆ ಹಕ್ಕು ಇರುತ್ತದೆ. ದಾವಾ ಸ್ವತ್ತು ನನ್ನ ಹಾಗೂ ವಾದಿಯ ಒಟ್ಟು ಕುಟುಂಬದ ಆಸ್ತಿಯಾಗಿರಲಿಲ್ಲ ಎಂದರೆ ನನಗೆ ದಾವಾ ಸ್ವತ್ತಿನಲ್ಲಿ ಹಿಸ್ಸೆ ಇರುತ್ತದೆ. ದಾವಾ ಸ್ವತ್ತು ವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ನಮಗೆಯಾವುದೇ ಹಕ್ಕು ಇಲ್ಲದಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**C/c** ಅಪರ ಸಿವಿಲ್ ನ್ಯಾಂ ಮತ್ತು ಜೆಎಂಎಫ್‌ಸಿಃ
ಸೊರಬ